1	2	3	4	5		6	7	8	9	10	11
39	ಉಪ ಅರಣ್ಯ ಸಂರಕ್ಷಣಾಧಿಕಾರಿ, ಪ್ರಾದೇಶಿಕ ವಿಭಾಗ, ತುಮಕೂರು.	ಎ.ಅಕಾ/ ಟೆಂಡರ್/ ವಿವ.10/ 2008–09, ದಿನಾಂಕ 14–07–2008.	ಗುಬ್ಬಿ	KSFMBC	39	2008–09ನೇ ಸಾಲಿನಲ್ಲಿ ಮುಂಗಡ ಕಾಮಗಾರಿಗಳು (ಪಿಟ್ಸ್ ಅಗೆತ, ಜಾನುವಾರು ನಿರೋಧಕ ಕಂದಕಗಳನ್ನು ಮ್ಯಾನ್ಯುವೆಲ್ ಅಥವಾ ಜೆಸಿಬಿ ಯಂತ್ರದ ಮೂಲಕ ತೆಗೆಯುವುದು)	ಬೆಣ್ಣೆಹಳ್ಳ ಕಾವಲ್ ಮೀಅ.	M-05	25	209900	5300
40	–"–	–"–	ಗುಬ್ಬಿ	–"–	40	2008–09ನೇ ಸಾಲಿನಲ್ಲಿ ಮಣ್ಣು ಸಂರಕ್ಷಣಾ ಕಾಮಗಾರಿಗಳಾದ ನಾಲಾಬಂಡ್ ಅಥವಾ ಪರ್ಕ್ಯೂಲೇಷನ್ ಪಾಂಡ್ ಗಲ್ಲಿಚೆಕ್ಸ್ , ಚೆಕ್‌ಡ್ಯಾಂ ಅರ್ಥರನ್‌ಬಂಡ್ಸ್, of required Nos ನಿರ್ಮಾಣ ಮಾಡುವುದು.	ಬೆಣ್ಣೆಹಳ್ಳ ಕಾವಲ್ ಮೀಅ..	M-05	25	103800	2600
41	–"–	–"–	ಶಿರಾ	–"–	41	2008–09ನೇ ಸಾಲಿನಲ್ಲಿ ಮುಂಗಡ ಕಾಮಗಾರಿಗಳು (ಪಿಟ್ಸ್ ಅಗೆತ, ಜಾನುವಾರು ನಿರೋಧಕ ಕಂದಕಗಳನ್ನು ಮ್ಯಾನ್ಯುವೆಲ್ ಅಥವಾ ಜೆಸಿಬಿ ಯಂತ್ರದ ಮೂಲಕ ತೆಗೆಯುವುದು)	ರಂಗನಾಥಪುರ ಎಸ್ ಎಫ್	M-05	25	209900	5300
42	–"–	–"–	ಶಿರಾ	–"–	42	2008–09ನೇ ಸಾಲಿನಲ್ಲಿ ಮಣ್ಣು ಸಂರಕ್ಷಣಾ ಕಾಮಗಾರಿಗಳಾದ ನಾಲಾಬಂಡ್ ಅಥವಾ ಪರ್ಕ್ಯೂಲೇಷನ್ ಪಾಂಡ್ ಗಲ್ಲಿಚೆಕ್ಸ್ , ಚೆಕ್‌ಡ್ಯಾಂ ಅರ್ಥರನ್‌ಬಂಡ್ಸ್, of required Nos ನಿರ್ಮಾಣ ಮಾಡುವುದು.	ರಂಗನಾಥಪುರ ಎಸ್ ಎಫ್	M-05	25	103800	2600

1	2	3	4	5		6	7	8	9	10	11
43	ಉಪ ಅರಣ್ಯ ಸಂರಕ್ಷಣಾಧಿಕಾರಿ, ಪ್ರಾದೇಶಿಕ ವಿಭಾಗ, ತುಮಕೂರು.	ಎ.ಅಕಾ/ ಟೆಂಡರ್/ ವಿವ.10/ 2008–09, ದಿನಾಂಕ 14–07–2008.	ಶಿರಾ	KSFMBC	43	2008–09ನೇ ಸಾಲಿನಲ್ಲಿ ಮುಂಗಡ ಕಾಮಗಾರಿಗಳು (ಪಿಟ್ಸ್ ಅಗೆತ, Ripping by D-80 buldozer dozing ಜಾನುವಾರು ನಿರೋಧಕ ಕಂದಕಗಳನ್ನು ಮ್ಯಾನ್ಯುವೆಲ್ ಅಥವಾ ಜೆಸಿಬಿ ಯಂತ್ರದ ಮೂಲಕ ತೆಗೆಯುವುದು)	ರಂಗನಾಥಪುರ ಎಸ್ ಎಫ್ (ಗೊಲ್ಲರಹಟ್ಟಿ ಪ್ರದೇಶ)	M-05	25	209900	5300
44	–“–	–“–	ಶಿರಾ	–“–	44	2008–09ನೇ ಸಾಲಿನಲ್ಲಿ ಮಣ್ಣು ಸಂರಕ್ಷಣಾ ಕಾಮಗಾರಿಗಳಾದ ನಾಲಾಬಂಡ್ ಅಥವಾ ಪರ್ಕ್ಯೂಲೇಷನ್ ಪಾಂಡ್ ಗಲ್ಲಿಚೆಕ್ಸ್ , ಚೆಕ್‌ಡ್ಯಾಂ ಅರ್ಥರನ್‌ಬಂಡ್ಸ್, of required Nos ನಿರ್ಮಾಣ ಮಾಡುವುದು.	ರಂಗನಾಥಪುರ ಎಸ್ ಎಫ್ (ಗೊಲ್ಲರಹಟ್ಟಿ ಪ್ರದೇಶ)	M-05	25	103800	2600
45			ಬುಕ್ಕಾಪಟ್ಟಣ	–“–	45	2008–09ನೇ ಸಾಲಿನಲ್ಲಿ ಮುಂಗಡ ಕಾಮಗಾರಿಗಳು (ಪಿಟ್ಸ್ ಅಗೆತ, ಜಾನುವಾರು ನಿರೋಧಕ ಕಂದಕಗಳನ್ನು ಮ್ಯಾನ್ಯುವೆಲ್ ಅಥವಾ ಜೆಸಿಬಿ ಯಂತ್ರದ ಮೂಲಕ ತೆಗೆಯುವುದು)	ಬುಕ್ಕಾಪಟ್ಟಣ ಮೀ.ಅ	M-05	20	167900	4200
46			ಬುಕ್ಕಾಪಟ್ಟಣ	–“–	46	2008–09ನೇ ಸಾಲಿನಲ್ಲಿ ಮಣ್ಣು ಸಂರಕ್ಷಣಾ ಕಾಮಗಾರಿಗಳಾದ ನಾಲಾಬಂಡ್ ಅಥವಾ ಪರ್ಕ್ಯೂಲೇಷನ್ ಪಾಂಡ್ ಗಲ್ಲಿಚೆಕ್ಸ್ , ಚೆಕ್‌ಡ್ಯಾಂ ಅರ್ಥರನ್‌ಬಂಡ್ಸ್, of required Nos ನಿರ್ಮಾಣ ಮಾಡುವುದು.	ಬುಕ್ಕಾಪಟ್ಟಣ ಮೀ.ಅ	M-05	20	83000	2100

1	2	3	4	5		6	7	8	9	10	11
47	ಉಪ ಅರಣ್ಯ ಸಂರಕ್ಷಣಾಧಿಕಾರಿ, ಪ್ರಾದೇಶಿಕ ವಿಭಾಗ, ತುಮಕೂರು.	ಎ.ಅಕಾ/ ಟೆಂಡರ್/ ವಿವ.10/ 2008–09, ದಿನಾಂಕ 14–07–2008.	ಪಾವಗಡ	12th Finance	47	2008–09ನೇ ಸಾಲಿನಲ್ಲಿ ಮುಂಗಡ ಕಾಮಗಾರಿಗಳು (ಪಿಟ್ಸ್ ಅಗೆತ, Ripping by D-80 buldozer dozing ಜಾನುವಾರು ನಿರೋಧಕ ಕಂದಕಗಳನ್ನು ಮ್ಯಾನ್ಯುವೆಲ್ ಅಥವಾ ಜೆಸಿಬಿ ಯಂತ್ರದ ಮೂಲಕ ತೆಗೆಯುವುದು ಹಾಗೂ ಎಸ್ಎಂಸಿ ಕಾಮಗಾರಿಗಳು.	ಕೋಟುಗುಡ್ಡ ಮೀ.ಅ	M-04	20	286000	7200
48			ಪಾವಗಡ	DDF	48	2008–09ನೇ ಸಾಲಿನಲ್ಲಿ ಮುಂಗಡ ಕಾಮಗಾರಿಗಳು ಕಂದಕಗಳನ್ನು ತೆಗೆಯುವುದು (ಪಿಟ್ಸ್ ಅಗೆತ, Ripping by D-80 buldozer Mound formation ಹಾಗೂ ಎಸ್.ಎಂ.ಸಿ. ಕಾಮಗಾರಿಗಳು	ಕೋಟುಗುಡ್ಡ ಮೀ.ಅ	M-04	15	160000	4000

ನಿಬಂಧನೆಗಳು

1. ಎ) ಟೆಂಡರ್ ಫಾರಂನ್ನು ಟೆಂಡರ್ ದಿನಾಂಕದಂದು ಅಪರಾಹ್ನ 1.00 ಗಂಟೆಯವರೆಗೆ ರೂ. 200–00 ಮತ್ತು ತೆರಿಗೆ ಪಾವತಿ ಮಾಡಿ ಪಡೆಯಬಹುದಾಗಿದೆ. ಭರ್ತಿ ಮಾಡಿದ ಟೆಂಡರ್ ಫಾರಂನ್ನು ಸಂಬಂಧಪಟ್ಟ ವಲಯಕ್ಕೆಂದು ನಮೂದಿಸಿ ಈ ಕಛೇರಿಯಲ್ಲಿ ಇಟ್ಟಿರುವ ಮೊಹರಾದ ಪೆಟ್ಟಿಗೆಯಲ್ಲಿ ಮಧ್ಯಾಹ್ನ 3.00 ಗಂಟೆಯವರೆಗೆ ಹಾಕಬಹುದಾಗಿದೆ.
   ಬಿ) ಟೆಂಡರ್ ಫಾರಂನ್ನು ವಲಯ ಸ್ಥಳವಾರು ಯೋಜನೆ ಅಥವಾ ಯೋಜನೇತರವಾರು ಪ್ರತ್ಯೇಕವಾಗಿ ಉಪಯೋಗಿಸುವುದು.
2. i) ಭರ್ತಿ ಮಾಡಿದ ಟೆಂಡರುಗಳನ್ನು ವಲಯವಾರು, ಸ್ಥಳ ಮತ್ತು ಕೆಲಸವಾರು ಸಲ್ಲಿಸಬೇಕು. ಹಾಗೂ ದರವನ್ನು ನಮೂದಿಸುವಾಗ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಬೆಂಗಳೂರು ರವರ 2008–09ನೇ ಸಾಲಿಗೆ ಮಂಜೂರಾದ ಎಸ್.ಎಸ್.ಆರ್. ದರಕ್ಕೆ ಶೇಕಡವಾರು ಇಂತಿಷ್ಟು ಹೆಚ್ಚು ಸಮ ಅಥವಾ ಕಡಿಮೆ ಎಂದು ನಮೂದಿಸಬೇಕು.
   ii) ಅದೇ ರೀತಿ ಅರ್ದನ್ ಬಂಡ್ಸ್, ಅರ್ದನ್ ಎಂಬಾಕ್ ಮೆಂಟ್ಸ್, ಸ್ಟೋನ್ ಪಿಚ್ಚಿಂಗ್ ಕಾಮಗಾರಿ, ಪಿಕ್ಅಪ್ ಡ್ಯಾಮ್ಸ್, ಕೃಷಿ ಹೊಂಡ, ನಾಲಾಬಂಡ್ ಇತ್ಯಾದಿಗೆ ಎಂ.ಐ. ಎಸ್.ಆರ್. ಧರಕ್ಕೆ ಇಂತಿಷ್ಟು ಹೆಚ್ಚು, ಸಮ ಅಥವಾ ಕಡಿಮೆ ಎಂದು ನಮೂದಿಸಬೇಕು.
   iii) ಮಣ್ಣು ಸಂರಕ್ಷಣೆ ಕಾಮಗಾರಿಗಳಾದ ಚೆಕ್ಡ್ಯಾಂ ಗಲ್ಲಿಚೆಕ್ಸ್, ಬೋಲ್ಡರ್ ಚೆಕ್ಸ್, ರಬ್ಬರ್ ಚೆಕ್ಸ್, ಇತ್ಯಾದಿಗಳಿಗೆ ವಾಟರ್ ಶೆಟ್, ಡೆವಲಪ್ಮೆಂಟ್ಸ್ (ಎಸ್.ಸಿ.) ಇಲಾಖೆ ಎಸ್.ಆರ್. ದರಕ್ಕೆ ಇಂತಿಷ್ಟು ಜಾಸ್ತಿ ಸಮ ಅಥವಾ ಕಡಿಮೆ ಎಂದು ನಮೂಧಿಸಬೇಕು.
   iv) ಮ್ಯಾನುವೆಲ್ ಜಾನುವಾರು ನಿರೋಧಕ ಕಂದಕ (ಸಿಪಿಟಿ) ತೆಗೆಯಲು ಹಾಗೂ ಜೆಸಿಬಿ ಯಂತ್ರ ಉಪಯೋಗಿಸಿ ಸಿಪಿಟಿ ತೆಗೆಯಲು ಪ್ರತ್ಯೇಕವಾಗಿ ದರಗಳನ್ನು ನಮೂದಿಸಬೇಕು.
   v) Ripping by D-80 Buldozer ಮತ್ತು dozing ಕಾಮಗಾರಿಗಳಿಗೆ ಪ್ರತಿ ಹೆಕ್ಟೇರ್‌ಗೆ ದರ ನಮೂದಿಸುವುದು.
3. ಸ್ವೀಕರಿಸಲಾದ ಟೆಂಡರ್‌ಗಳನ್ನು ಆಯಾ ದಿನಾಂಕಗಳಂದು ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳವರು ಅಥವಾ ಅವರಿಂದ ನೇಮಿಸಲ್ಪಟ್ಟವರಿಂದ ಅಪರಾಹ್ನ 4.00 ಗಂಟೆಗೆ ಹಾಜರಿರುವ ಅರಣ್ಯ ಗುತ್ತಿಗೆದಾರರ ಸಮ್ಮುಖದಲ್ಲಿ ತೆರೆಯಲಾಗುವುದು.
4. ಕೆಲಸಗಳು ಕಾಲಬದ್ದವಾಗಿದ್ದು ಒಂದು ಪಕ್ಷ ಯಾವುದಾದರೂ ವಲಯದಲ್ಲಿ ಟೆಂಡರ್ ಮುಂಚೆ ಕೆಲಸಗಳನ್ನು ಕೈಗೊಂಡಿದ್ದ ಪಕ್ಷದಲ್ಲಿ ಅಂತಹ ಕೆಲಸಗಳು ಈ ಪ್ರಕಟಣೆಯಿಂದ ಹೊರತುಪಡಿಸಿದವುಗಳಾಗಿರುತ್ತವೆ.

5. ಪ್ರತಿ ಟೆಂಡರ್‌ದಾರರು ಕಾಮಗಾರಿಗಳನ್ನು ನಿರ್ವಹಿಸಲು ಅಗತ್ಯವಿರುವ ಸಲಕರಣೆಗಳನ್ನು ಹಾಗೂ ಸಾಗಾಣಿಕೆ ವಾಹನಗಳನ್ನು ಸ್ವಂತವಾಗಿ ಮಾಡಿಕೊಳ್ಳಬೇಕು.
6. ಈ ಮೇಲಿನ ಕೆಲಸಗಳಿಗೆ ಟೆಂಡರ್ ಸಲ್ಲಿಸಲು ಇಚ್ಚಿಸುವವರು ಆಯಾ ಕೆಲಸಕ್ಕೆ ನಿಗದಿಪಡಿಸಿದ ಇ.ಎಂ.ಡಿ ಮೊತ್ತಕ್ಕೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ತುಮಕೂರು ವಿಭಾಗ, ತುಮಕೂರು ಇವರ ಹೆಸರಿಗೆ ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕಿನಿಂದ ಪಡೆದು ಡಿ.ಡಿ. ರೂಪದಲ್ಲಿ ಪಾವತಿಸಬೇಕು.
7. ಗುತ್ತಿಗೆದಾರರು ಸಲ್ಲಿಸುವ ಷರತ್ತುಗಳನ್ನೊಳಗೊಂಡ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು.
8. ಯಾವುದೇ ಕಾರಣ ನೀಡದೇ ಟೆಂಡರ್‌ಗಳನ್ನು ಒಪ್ಪುವ ಅಥವಾ ತಿರಸ್ಕರಿಸುವ ಹಕ್ಕು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ತುಮಕೂರು ವಿಭಾಗ, ತುಮಕೂರು ಇವರು ಕಾಯ್ದಿರಿಸಿಕೊಂಡಿದ್ದಾರೆ.
9. ಪೂರ್ಣಗೊಂಡ ಕಾಮಗಾರಿಗಳಿಗೆ ಸರ್ಕಾರದಿಂದ ಅನುದಾನವು, ತುಮಕೂರು ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿಗೆ ತಲುಪಿದ ನಂತರ ಪಾವತಿ ಮಾಡಲಾಗುವುದಿಲ್ಲ.
10. ಈ ಮೇಲಿನ ಕಾಮಗಾರಿಗಳ ಹಣ ಪಾವತಿಸುವುದು ಆಯಾ ಯೋಜನೆಗಳಡಿ ಬಿಡುಗಡೆಗೊಳ್ಳುವ ಅನುದಾನ ಮತ್ತು ಅನುಮೋದನೆಯ ನಿಬಂಧನೆಗೆ ಒಳಪಟ್ಟಿರುತ್ತದೆ. ಒಂದು ಪಕ್ಷದಲ್ಲಿ ಸರ್ಕಾರದಿಂದ ಹಣ ಬಿಡುಗಡೆಯಾಗುವುದು ತಡವಾದ ಪಕ್ಷದಲ್ಲಿ ಅಂತಹ ಹಣ ಪಾವತಿಗೆ ಯಾವುದೇ ತರಹದ ಬಡ್ಡಿ ನೀಡಲಾಗುವುದಿಲ್ಲ.
11. ಈ ಅರಣ್ಯ ಕಾಮಗಾರಿಗಳು ಕಾಲಬದ್ದ ಕಾಮಗಾರಿಗಳಾಗಿದ್ದು, ಅವುಗಳನ್ನು ಕಾಲಮಿತಿ ಮತ್ತು ನಿಗದಿತ ಸಮಯಗಳಲ್ಲಿ ಕಾಮಗಾರಿಗಳನ್ನು ನಿರ್ವಹಿಸಲು ವಿಫಲರಾದಲ್ಲಿ ಅಂತಹ ಕಾಮಗಾರಿಗಳನ್ನು ಇಲಾಖಾ ಮೂಲಕ ನಿರ್ವಹಿಸಲಾಗುವುದು ಹಾಗೂ ಇಎಂಡಿ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು, ಇಲಾಖಾ ಮೂಲಕ ನಿರ್ವಹಿಸಿದಲ್ಲಿ ಹೆಚ್ಚು ವೆಚ್ಚವಾದರೆ ಅದನ್ನು ಸಂಬಂಧಪಟ್ಟವರಿಂದ ವಸೂಲಿ ಮಾಡಲಾಗುವುದು.
12. ವಿಜೇತ ಟೆಂಡರ್‌ದಾರರು ಆದೇಶದ 7 ದಿನಗಳೊಳಗಾಗಿ ಕರಾರನ್ನು ಚಾಲ್ತಿ ದರ ಛಾಪಾ ಕಾಗದದ ಮೇಲೆ ತುಮಕೂರು ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಸಮಕ್ಷಮದಲ್ಲಿ ಮಾಡಿಕೊಳ್ಳತಕ್ಕದ್ದು,
13. ಎ) ವಿಜೇತ ಟೆಂಡರ್‌ದಾರರು ಕರಾರಿನಲ್ಲಿ ನಮೂಧಿಸಿದ ಅವಧಿಯಲ್ಲಿ ಕಾಮಗಾರಿಯನ್ನು ಪೂರೈಸತಕ್ಕದ್ದು,
    ಬಿ) ಅನಿವಾರ್ಯ ಸಂದರ್ಭಗಳಲ್ಲಿ ಅವಧಿಯನ್ನು ವಿಸ್ತರಿಸುವ /ತಿರಸ್ಕರಿಸುವ ಸಂಪೂರ್ಣ ಅಧಿಕಾರದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಸೇರಿರುತ್ತದೆ.
14. ಕೆಲಸಗಳನ್ನು ಆಯಾಯ ಉಪ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರ ಪರಿಶೀಲನೆ ಹಾಗೂ ದೃಢೀಕರಣವನ್ನು ಅನುಸರಿಸಿ ಬಿಲ್ಲನ್ನು ಪಾವತಿ ಮಾಡಲಾಗುವುದು. ಹಾಗೂ ಪಾವತಿಸುವ ಶೇ.2 ರಷ್ಟು ಹಣವನ್ನು ಆದಾಯ ತೆರಿಗೆ ಬಾಬ್ತು ಹಿಡಿಯಲಾಗುವುದು ಮತ್ತು 2.5 ರಷ್ಟು ಭದ್ರತಾ ಠೇವಣಿ ಹಿಡಿಯಲಾಗುವುದು. ಕಾಲಬದ್ದ ಕೆಲಸಗಳ ಬಾಬ್ತು ಸರ್ಕಾರವು ನಿಗದಿಪಡಿಸಿದ ಇತರೆ ತೆರಿಗೆಗಳನ್ನು ಸಂಬಂಧಪಟ್ಟ ಬಿಲ್ಲುಗಳಲ್ಲಿ ಕಟಾಯಿಸಲಾಗುವುದು.
15. ಯಾವುದೇ ತಕರಾರಿನ ಬಗ್ಗೆ ತುಮಕೂರು ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಯವರಲ್ಲಿ ಮೇಲ್ಮನವಿ ಸಲ್ಲಿಸಬಹುದು. ಅವರ ಆದೇಶವು ಅಧೀನಾಧಿಕಾರಿಗಳಿಗೆ ಹಾಗೂ ಗುತ್ತಿಗೆದಾರರಿಗೆ ಪಾಲನಾರ್ಹವಾದುದು.
16. ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಆದೇಶದ ಬಗ್ಗೆ ತೃಪ್ತಿಯಿಲ್ಲವಾದರೆ ಹಾಸನ ವೃತ್ತದ ಅರಣ್ಯ ಸಂರಕ್ಷಣಾಧಿಕಾರಿಯವರಲ್ಲಿ ಮೇಲ್ಮನವಿ ಸಲ್ಲಿಸಬಹುದು. ಹಾಗೂ ಅವರು ಕೊಡುವ ತೀರ್ಪು ಅಂತಿಮವಾದುದು.
17. ಕಾಮಗಾರಿ ಸ್ಥಳಗಳು ತಾತ್ಕಾಲಿಕವಾಗಿದ್ದು ಅವುಗಳ ಸ್ಥಳ ಬದಲಾವಣೆಗಳಾಗುವ ಸಂಭವವಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.
18. ಕೆಲಸದ ಪರಿಣಾಮ ಹೆಚ್ಚುವರಿ ಅಥವಾ ಕಡಿಮೆಯಾಗುವ ಸಾಧ್ಯತೆಯಿದ್ದು ಹೆಚ್ಚುವರಿಯಾದ ಕೆಲಸವನ್ನು ಹಾಗೂ ಇತರೆ ಕಾಮಗಾರಿಗಳನ್ನು ಸಹ ಒಪ್ಪಿಗೆಯಾದ ಟೆಂಡರಿನ ದರದಲ್ಲಿ ಆಯಾ ವಲಯ ಅರಣ್ಯಾಧಿಕಾರಿಗಳು ಸೂಚಿಸುವ ಜಾಗದಲ್ಲಿಯೇ ಮಾಡತಕ್ಕದ್ದು.
19. ಕರ್ನಾಟಕ ಅರಣ್ಯ ಕಾಯ್ದೆ ಕರ್ನಾಟಕ ಅರಣ್ಯ ಸಂಹಿತೆ, ಕರ್ನಾಟಕ ಅರಣ್ಯ ಮ್ಯಾನ್ಯುಯಲ್ ಹಾಗೂ ಸರ್ಕಾರಿ ಅಧಿಸೂಚನೆ, ಆದೇಶಗಳು ಮತ್ತು ಕಾಲಕಾಲಕ್ಕೆ ಇಲಾಖೆಯಿಂದ ನೀಡಿದ ಸುತ್ತೋಲೆ ಮೇಲೆ ನಿರ್ದೇಶನ ಪ್ರಕಾರ ಅರಣ್ಯ ಗುತ್ತಿಗೆದಾರರು ಹಾಗೂ ಒಟ್ಟಾಗಿ ಕಾಮಗಾರಿಗಳನ್ನು ನಿರ್ವಹಿಸುವುದು.

ಉಪ ಅರಣ್ಯ ಸಂರಕ್ಷಣಾಧಿಕಾರಿ,
ತುಮಕೂರು ವಿಭಾಗ, ತುಮಕೂರು.

ಪಿ.ಆರ್. 407

ಉಪ ಅರಣ್ಯ ಸಂರಕ್ಷಣಾಧಿಕಾರಿ, ಪ್ರಾದೇಶಿಕ ವಿಭಾಗ, ತುಮಕೂರುರವರ ಕಚೇರಿಯ ಸಂಕ್ಷಿಪ್ತ ಹರಾಜು ಪ್ರಕಟಣೆ

ನಂಬ್ರ:ಎ8:ಸೇಲ್ಸ್:KSFICಪಾವ:286/08–09, ದಿನಾಂಕ: 14ನೇ ಜುಲೈ 2008

ಈ ಮೂಲಕ ಸಮಸ್ತ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ತುಮಕೂರು ಅರಣ್ಯ ವಿಭಾಗದ ಪಾವಗಡ ವಲಯ ವ್ಯಾಪ್ತಿಯ ರಸ್ತೆಬದಿ ನೀಲಗಿರಿ ಮರಗಳನ್ನು ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ, ಬೆಂಗಳೂರುರವರು ಕತ್ತಾವಣೆ ಮಾಡಿ ಸಿದ್ದಪಡಿಸಿ ಇಲಾಖೆಗೆ ಹಸ್ತಾಂತರಿಸಿರುವ ನಾಟಾಗಳನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ ಅಥವಾ ಅವರಿಂದ ನಿಯೋಜಿಸಲ್ಪಟ್ಟ ಅಧಿಕಾರಿಗಳಿಂದ ಈ ಕೆಳಕಂಡ ಸ್ಥಳ ಹಾಗೂ ದಿನಾಂಕದಂದು ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡಲಾಗುವುದು ಇಚ್ಚೆಯುಳ್ಳ ಖರೀದಿದಾರರು ಹರಾಜಿನಲ್ಲಿ ಭಾಗವಹಿಸಿ ಈ ಕೆಳಕಂಡ ಷರತ್ತಿಗೊಳಪಟ್ಟು ಉತ್ಪನ್ನವನ್ನು ಖರೀದಿಸಬಹುದಾಗಿರುತ್ತದೆ.

ಕ್ರ. ಸಂ.	ವಲಯ	ಹರಾಜಿಗೆ ಇಡಲಾಗಿರುವ ಅರಣ್ಯೋತ್ಪನ್ನದ ವಿವರಗಳು	ಅಂದಾಜು ಪ್ರಮಾಣ	ಹರಾಜಿನ ದಿನಾಂಕ ಮತ್ತು ವೇಳೆ	ಹರಾಜು ನಡೆಯುವ ಸ್ಥಳ
1	ಪಾವಗಡ	**ನೀಲಗಿರಿ ನಾಟಾ** 1985ನೇ ಸಾಲಿನಲ್ಲಿ NREP ಯೋಜನೆಯಲ್ಲಿ ದೊಡ್ಡಹಳ್ಳಿಯಿಂದ ವೈ.ಎನ್. ಹೊಸಕೋಟೆವರೆಗಿನ ರಸ್ತೆ ಬದಿಯಲ್ಲಿ ಬೆಳೆಸಲಾಗಿದ್ದ ನೀಲಗಿರಿ ಮರಗಳ ಕತ್ತಾವಣೆಯಿಂದ ಸಿದ್ದಪಡಿಸಲಾದ ನಾಟಾ	234.965 ಘ.ಮಿ. ಒಟ್ಟು 144 ಲಾಟುಗಳು	05.08.2008 ಬೆಳಿಗ್ಗೆ 11.00 ಘಂಟೆ	ಪಾವಗಡ ಅರಣ್ಯ ವಲಯ ವ್ಯಾಪ್ತಿಯ ಕೊಟ್ಟಗುಡ್ಡ ಅರಣ್ಯ ಸಸ್ಯಕ್ಷೇತ್ರದ ಆವರಣ

ಮಾರಾಟದ ಷರತ್ತುಗಳು:

1) ಹರಾಜಿನಲ್ಲಿ ಭಾಗವಹಿಸುವ ಮೊದಲು ಹರಾಜುದಾರರು ಹರಾಜು ಪ್ರಕಟಣೆ ಹಾಗೂ ಷರತ್ತುಗಳನ್ನು ಖಡ್ಡಾಯವಾಗಿ ಓದಿ ಸಹಿ ಮಾಡಿದ ನಂತರವೇ ಭಾಗವಹಿಸುವುದು.

1(1) ಅರಣ್ಯೋತ್ಪನ್ನವನ್ನು ಅವಶ್ಯಕತೆಗೆ ತಕ್ಕಂತೆ ಲಾಟುಗಳನ್ನಾಗಿ ವಿಂಗಡಿಸಿ ಹರಾಜು ಮಾಡಲಾಗುವುದು.

2) ಇಲಾಖೆಯಿಂದ ನಿಗದಿಪಡಿಸಿದ ಅಳತೆ ಹಾಗೂ ವರ್ಗೀಕರಣ ಅಂತಿಮವಾಗಿರುತ್ತದೆ. ಹರಾಜಿನಲ್ಲಿ ಭಾಗವಹಿಸುವ ಬಿಡ್ಡುದಾರರು ಹರಾಜಿಗೆ ಮೊದಲು ನಾಟಾದ ಅಳತೆ/ವರ್ಗೀಕರಣ/ಹಾಗೂ ಪ್ರಮಾಣವನ್ನು ನೋಡಿ ಖಚಿತಪಡಿಸಿಕೊಂಡು ತೃಪ್ತಿಪಟ್ಟುಕೊಳ್ಳಬೇಕಾಗಿರುತ್ತದೆ. ಈ ಬಗ್ಗೆ ಯಾವುದೇ ದೂರುಗಳನ್ನು ಸ್ವೀಕರಿಸಲಾಗುವುದಿಲ್ಲ.

2(1) ಲಾಟುಗಳ ವಿವರಣೆ, ಪ್ರಮಾಣ, ಕೊರತೆ ಅಥವಾ ಟೊಳ್ಳು ನಾಟಾ ಇತ್ಯಾದಿಗಳ ಬಗ್ಗೆ ಹರಾಜು ಕೂಗಿದ ನಂತರ ಯಾವುದೇ ದೂರು ಸಲ್ಲಿಸಲು ಅವಕಾಶವಿರುವುದಿಲ್ಲ.

2(2) ಹರಾಜು ನಡೆಯುವ ಸಮಯದಲ್ಲಿ ಹರಾಜಿನ ವೇಳೆಯನ್ನು ಅವಶ್ಯಕತೆಗೆ ತಕ್ಕಂತೆ Announcement (ಪ್ರಚಾರದ ಮೂಲಕ) ಬದಲಾಯಿಸಿಕೊಳ್ಳುವ ಅಧಿಕಾರವು ಹರಾಜು ನಡೆಸುವ ಅಧಿಕಾರಿಗೆ ಇರುತ್ತದೆ.

3) ಕಪ್ಪುಪಟ್ಟಿಗೆ ಸೇರಿದ/ದಿವಾಳಿಯಾದ/ಬಾಕಿ ಪಾವತಿಸಬೇಕಾದ ವ್ಯಕ್ತಿಗಳು ಹಾಗೂ ವಯಸ್ಕರಲ್ಲದವರು ಹರಾಜಿನಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ.

4(1) ಹರಾಜಿನಲ್ಲಿ ಭಾಗವಹಿಸುವ ಪ್ರತಿಯೊಬ್ಬ ಬಿಡ್ಡುದಾರರು ಉಪ ಅರಣ್ಯ ಸಂರಕ್ಷಣಾಧಿಕಾರಿ, ತುಮಕೂರು ವಿಭಾಗರವರ ಹೆಸರಿಗೆ ಯಾವುದೇ ಅಧಿಕೃತ ಬ್ಯಾಂಕಿನಿಂದ ಇಎಂಡಿ ಮೊಬಲಗು ಬಾಬ್ತು ಪಡೆದ ಡಿಡಿಯನ್ನು ಹರಾಜಿನಲ್ಲಿ ಭಾಗವಹಿಸುವ ಮೊದಲು ಸಂದಾಯ ಮಾಡಬೇಕು. ಯಶಸ್ವಿ ಬಿಡ್ಡುದಾರರ ಇಎಂಡಿ ಮೊಬಲಗನ್ನು ಹರಾಜಿನ ಮುಕ್ತಾಯದ ನಂತರ ಪಾವತಿಸಬೇಕಾದ ಶೇ.$^1/_4$ ಭಾಗದ ಮಾರಾಟ ಮೊಬಲಗಿಗೆ ಹೊಂದಿಸಿಕೊಳ್ಳಲಾಗುವುದು.

ಬಿಡ್ಡುದಾರರು ರೂಪಾಯಿ 20000/– ಮೌಲ್ಯ ಮೀರದ ನಾಟಾವನ್ನು ಪಡೆಯಲು ಇಚ್ಚೆಪಟ್ಟಲ್ಲಿ ರೂಪಾಯಿ 5000/– ಇಎಂಡಿ ಮೊಬಲಗನ್ನು, ರೂಪಾಯಿ 20000/–ಕ್ಕೂ ಹೆಚ್ಚಿನ ಮೌಲ್ಯದ ನಾಟಾವನ್ನು ಪಡೆಯಲು ಇಚ್ಚೆಪಟ್ಟಲ್ಲಿ ರೂ. 20000/– ಮೊಬಲಗಿನ ಇಎಂಡಿ ಮೊಬಲಗನ್ನು ಪಾವತಿಸಬೇಕು.

5(1) ಹರಾಜಿನಲ್ಲಿ ಭಾಗವಹಿಸುವ ಬಿಡ್ಡುದಾರರು ಯಾವುದೇ ಕಂಪನಿಯ ಸದಸ್ಯರಾಗಿದ್ದು, ಸದ್ರಿ ಕಂಪನಿಯ ಹೆಸರಿಗೆ ಹಣ ಪಾವತಿಸುವುದಾದಲ್ಲಿ ಅಂತಹ ಪ್ರಕರಣಗಳನ್ನು ಹೊರತುಪಡಿಸಿ ಬೇರೆ ಯಾವುದೇ ಬಿಡ್ಡುದಾರರು ಜಂಟಿಯಾಗಿ ಪಾವತಿಸಲಾಗುವ ಇಎಂಡಿ ಮೊಬಲಗನ್ನು ಅಂಗೀಕರಿಸುವುದಿಲ್ಲ.

5(2) ಯಾವುದೇ ಬಿಡ್ಡುದಾರರ ಪರವಾಗಿ ಏಜೆಂಟ್ ಆಗಿ ಹರಾಜು ಕೂಗಲು ಬಯಸಿದ ಬಿಡ್ಡುದಾರರು, ಹರಾಜು ನಡೆಸುವ ಅಧಿಕಾರಿಗಳಿಗೆ ಹರಾಜಿಗೆ ಮೊದಲು Power of Attorney ಹಾಜರುಪಡಿಸುವುದು.

5(3) ಯಾವುದೇ ಪ್ರಾಧಿಕಾರ ಅಥವಾ ಇಲಾಖೆಯ ಮುಖ್ಯಸ್ಥರ ಪರವಾಗಿ ಏಜೆಂಟ್ ಆಗಿ ಹರಾಜು ಕೂಗಲು ಬಯಸಿದ ಬಿಡ್ಡುದಾರರು ಅವರಿಂದ ಪಡೆದ Letter of authority (Authorization) ನೀಡಬೇಕು.

5(4) ಯಾವುದೇ ಖಾಸಗಿ ಕಂಪನಿಗಳು ಹರಾಜಿನಲ್ಲಿ ಭಾಗವಹಿಸುವ ಪ್ರಸ್ತಾಪವಿದ್ದಲ್ಲಿ ಅಂತಹ ಕಂಪನಿಯು ದೃಢೀಕರಿಸಿದ ವ್ಯಕ್ತಿಯ ಹೆಸರನ್ನು, ಸೂಚಿಸಿದ ಹಾಗೂ ಪ್ರಾಧಿಕೃತ ಅಧಿಕಾರಿಯ ಸಹಿ ಇರುವ "ದೃಢೀಕರಣ ಪತ್ರ"ದೊಂದಿಗೆ ಹರಾಜಿನಲ್ಲಿ ಭಾಗವಹಿಸಬೇಕು.

6) ಹರಾಜಿನಲ್ಲಿ ಯಶಸ್ವಿಯಾಗದ ಬಿಡ್ಡುದಾರರಿಗೆ ಅವರು ಪಾವತಿಸಿದ ಇಎಂಡಿ ಮೊಬಲಗನ್ನು ಹರಾಜಿನ ದಿನದ ಕೊನೆಯಲ್ಲಿ ಹಿಂದಿರುಗಿಸಲಾಗುವುದು.

7) ಅತೀ ಹೆಚ್ಚು ಹರಾಜು ಕೂಗಿದ ಬಿಡ್ಡುದಾರರು ಸಾದಾರಣವಾಗಿ ಖರೀದಿದಾರರಾಗಿರುತ್ತಾರೆ. ಹರಾಜು ನಡೆಸುವ ಅಧಿಕಾರಿಗಳು ಯಾವುದೇ ಕಾರಣ ನೀಡದೆ ಹರಾಜನ್ನು ತಿರಸ್ಕರಿಸುವ ಅಥವಾ ಸ್ಥಗಿತಗೊಳಿಸುವ ಅಧಿಕಾರವುಳ್ಳವರಾಗಿರುತ್ತಾರೆ.

8) ಹರಾಜು ನಡೆಸುವ ಅಧಿಕಾರಿಯು ಹರಾಜನ್ನು ಬಿಡ್ಡುದಾರರ ಹೆಸರಿಗೆ ನಿಲ್ಲಿಸಿದ ಕೂಡಲೇ ಪ್ರತಿಯೊಬ್ಬ ಬಿಡ್ಡುದಾರರು ಹರಾಜಿನ ಲಾಟುಗಳ ಸಂಪೂರ್ಣ ಮಾಹಿತಿಯಿರುವ ಬಿಡ್‌ಲಿಸ್ಟ್‌ನಲ್ಲಿ ಅವರ ಸಂಪೂರ್ಣ ವಿಳಾಸ ನಮೂದಿಸುವುದರೊಂದಿಗೆ ಸಹಿಯನ್ನು ಮಾಡಬೇಕು. ಬಿಡ್‌ಲಿಸ್ಟ್‌ನಲ್ಲಿ ಬಿಡ್ಡುದಾರರ ಸಹಿಯಾದ ನಂತರ ಬಿಡ್ ಮೊಬಲಗು, ಪ್ರಮಾಣ ಹಾಗೂ ಹರಾಜಿನ ಪೂರ್ಣ ಷರತ್ತನ್ನು ಬಿಡ್ಡುದಾರರಿಂದ ಸಮ್ಮತಿಸಲಾಗಿದೆಯೆಂದು ಒಪ್ಪಿಕೊಳ್ಳಲಾಗುತ್ತದೆ.

9(1) ಹರಾಜು ನಡೆಸುವ ಅಧಿಕಾರಿಯಿಂದ ಖರೀದಿದಾರರ ಹೆಸರಿಗೆ ಹರಾಜು ಸ್ಥಿರೀಕರಿಸಿದ ನಂತರ ಖರೀದಿದಾರರು ಶೇ.1/4 ಭಾಗ ಮಾರಾಟದ ಮೊಬಲಗನ್ನು ಹಾಗೂ ಸಂಪೂರ್ಣ ತೆರಿಗೆಯನ್ನು ಪಾವತಿಸಿದಲ್ಲಿ ಷರತ್ತು ನಂ.4(1) ರಲ್ಲಿ ಪ್ರಸ್ತಾಪಿಸಿದಂತೆ ಹೊಂದಿಸಿಕೊಳ್ಳಲಾಗುವುದು. ಒಂದು ವೇಳೆ ಹರಾಜು ಮೊಬಲಗು 20000/– ರೂಪಾಯಿಗೂ ಕಡಿಮೆಯಿದ್ದಲ್ಲಿ ಅಂತಹ ಮೊಬಲಗನ್ನು ಹರಾಜಿನ ದಿನದ ಮುಕ್ತಾಯದ ವೇಳೆಗೆ ಮೊದಲು ನಗದು ಪಾವತಿಸತಕ್ಕದ್ದು.

9(2) ಒಂದು ವೇಳೆ ಬಿಡ್ಡು ಮೊತ್ತವನ್ನು ಹರಾಜಿನ ದಿನ ಪಾವತಿಸದೆ ಬಾಕಿಯಿದ್ದು ಮರುದಿನ ಕಚೇರಿಯ ಕೆಲಸದ ದಿನದಂದು ಪಾವತಿಸದಿದ್ದಲ್ಲಿ ಬಿಡ್ಡುದಾರರು ಪಾವತಿಸಲಾಗಿರುವ ಠೇವಣಿ ಮೊಬಲಗು ಹಾಗೂ ಇತರೇ ಪಾವತಿಸಲಾಗಿರುವ ಮೊಬಲಗನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಟಾವನ್ನು ಆದಷ್ಟು ಬೇಗನೆ ಮರು ಹರಾಜು ಮೂಲಕ ವಿಲೇವಾರಿ ಮಾಡಲಾಗುವುದು.

10) ಒಂದು ವೇಳೆ ಎರಡಾವರ್ತಿಯಾದ ಬಿಡ್ಡನ್ನು ಅಂಗೀಕರಿಸಲು ಪ್ರಾಧಿಕೃತ ಅಧಿಕಾರಿಗಳು ಸಮ್ಮತಿ ಸೂಚಿಸಿದಲ್ಲಿ, ಯಶಸ್ವಿ ಬಿಡ್ಡುದಾರರ ಹೆಸರಿಗೆ ಅವರ ಬಿಡ್ ಮೊಬಲಗನ್ನು ಅಂಗೀಕರಿಸಿರುವ ವಿಷಯವನ್ನು ನೊಂದಾಯಿತ ಅಂಚೆ ಮೂಲಕ ತಿಳಿಸಲಾಗುವುದು. ಈ ವ್ಯವಹಾರವನ್ನು ಹರಾಜಿನ ದಿನಾಂಕದ 30 ದಿನಗಳೊಳಗೆ ನಡೆಸಲಾಗುವುದು. ಈ ಅವಧಿಯೊಳಗೆ ಎರಡಾವರ್ತಿ ಬಿಡ್ಡುದಾರರು ಅವರ ಹರಾಜನ್ನು ಹಿಂತೆಗೆದುಕೊಳ್ಳುವಂತಿಲ್ಲ. ಬಿಡ್ಡುದಾರರ ಹೆಸರಿಗೆ ನೋಟಿಸನ್ನು ಕಳುಹಿಸಲು ಬೇಕಾದ ದಿನಾಂಕವನ್ನು ಸೇರಿದಂತೆ 30 ದಿನಗಳೆಂದು ತಿಳಿಯುವುದು.

11) ಹರಾಜು ಸ್ಥಿರೀಕರಣವು, ಪ್ರಾಧಿಕೃತ ಅಧಿಕಾರಿಗಳು ಯಾವುದೇ ಕಾರಣ ನೀಡದೇ ಹರಾಜನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಷರತ್ತಿಗೊಳಪಟ್ಟಿದೆ.

12) ಯಶಸ್ವಿ ಬಿಡ್ಡುದಾರರು ಹರಾಜು ಕೂಗುವ ಲಾಟುಗಳ ಮೌಲ್ಯ, ಇಎಂಡಿ ಮೊಬಲಗಿಗೂ ಮೀರದಿದ್ದಲ್ಲಿ ಅಂತಹ ಮೊಬಲಗನ್ನು ಬಿಡ್ ಮೊತ್ತಕ್ಕೆ ಹೊಂದಿಸಿಕೊಳ್ಳಲಾಗುವುದು. ಹಾಗೂ ಹಿಂದುರುಗಿಸಬೇಕಾದ ಬಾಕಿ ಮೊತ್ತವನ್ನು ನಂತರ ಹಿಂದಿರುಗಿಸಲಾಗುವುದು.

13(1) ತೀನ್‌ವಾರ್ (ಮೂರಾವರ್ತಿ) ಆಗಿರುವ ಲಾಟುಗಳಿಗೆ ಸಂಬಂಧಿಸಿದ ಬಾಕಿ ಪಾವತಿಸಬೇಕಾದ 3/4 ಭಾಗ ಹರಾಜಿನ ಮಾರಾಟದ ಮೊಬಲಗನ್ನು ಹರಾಜು ನಡೆಸಿದ 30 ದಿನಗಳ ಒಳಗಾಗಿ ಯಾವುದೇ ಅಧಿಕೃತ ಷೆಡ್ಯೂಲ್ ಬ್ಯಾಂಕಿನಿಂದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ತುಮಕೂರು ವಿಭಾಗರವರ ಹೆಸರಿಗೆ ಪಡೆದ ಡಿಡಿಯನ್ನು ಸಲ್ಲಿಸತಕ್ಕದ್ದು. ದೋನ್‌ವಾರ್ (ಎರಡಾವರ್ತಿ) ಆದ ಲಾಟುಗಳಿಗೆ ಬಾಕಿ ಪಾವತಿಸಬೇಕಾದ $^3/_4$ ಭಾಗ ಹರಾಜಿನ ಮೊಬಲಗನ್ನು ಹರಾಜು ಸ್ಥಿರೀಕರಿಸಿದ ದಿನದಿಂದ 30 ದಿನಗಳ ಒಳಗಾಗಿ ಯಾವುದೇ ಅಧಿಕೃತ ಷೆಡ್ಯೂಲ್ ಬ್ಯಾಂಕಿನಿಂದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ತುಮಕೂರು ವಿಭಾಗರವರ ಹೆಸರಿಗೆ ಪಡೆದ ಡಿಡಿಯನ್ನು ಸಲ್ಲಿಸತಕ್ಕದ್ದು.

13(2) ಬಿಡ್ ಮೊಬಲಗನ್ನು ಡಿಡಿ ಮೂಲಕ ಪಾವತಿಸಿದಲ್ಲಿ ಡಿಡಿಯನ್ನು ಸ್ವೀಕರಿಸುವ ದಿನಾಂಕವನ್ನು ಸಂದಾಯವಾದ ದಿನಾಂಕವೆಂದು ಪರಿಗಣಿಸಿ ಜಮಾ ತೆಗೆದುಕೊಳ್ಳಲಾಗುವುದು.

13(3) ಬಿಡ್ ಮೊಬಲಗು ಸಂಪೂರ್ಣವಾಗಿ ಸರ್ಕಾರಕ್ಕೆ ಜಮಾ ಆದ ನಂತರವೇ ಹರಾಜು ಸ್ಥಿರೀಕರಣದೊಂದಿಗೆ ನಾಟಾವನ್ನು ಬಿಡುಗಡೆಗೊಳಿಸಲಾಗುವುದು. ಯಾವುದೇ ಕಾರಣದಿಂದಲೂ ಬಿಡುಗಡೆ ಆದೇಶವನ್ನು ಡಿಡಿ ಸ್ವೀಕರಿಸಿದ 10 ದಿವಸಗಳೊಳಗೆ ನೀಡಲಾಗುವುದು.

14) ಮೇಲೆ ತಿಳಿಸಿದ ಷರತ್ತುಗಳಿಗೆ ವ್ಯತಿರಿಕ್ತವಾಗಿ ಪಾವತಿಸಲಾಗುವ ಯಾವುದೇ ಮೊಬಲಗಿಗೆ ಇಲಾಖೆಯು ಜವಾಬ್ದಾರಿಯಾಗಿರುವುದಿಲ್ಲ.

15) ಖರೀದಿದಾರರು ಬಿಡ್ ಮೊತ್ತದ ಬಾಕಿ $^3/_4$ ಭಾಗದಷ್ಟು ಪಾವತಿಸಬೇಕಾದ ಮೊಬಲಗಿನ ಅಂತಿಮ ದಿನದ ಗಡುವನ್ನು ಲಿಖಿತವಾಗಿ ನೊಟೀಸ್ ಮೂಲಕ ತಿಳಿಸಲಾಗುವುದಿಲ್ಲ. ನಿಗಧಿತ ಅವಧಿಯೊಳಗೆ ಬಾಕಿಯಿರುವ ಮೊತ್ತವನ್ನು ಪಾವತಿಸಲು ಬಿಡ್ಡುದಾರರೇ ವ್ಯವಸ್ಥೆ ಕಲ್ಪಿಸಿಕೊಳ್ಳಬೇಕಾಗಿದೆ.

16) ಬಿಡ್ಡುದಾರರು ಪಾವತಿಸಿ ಖರೀದಿಸಿದ ನಾಟಾಗಳ ವಿತರಣೆ EX-Depot ಆಗಿರುತ್ತದೆ.

17) ಪೂರ್ಣ ಪ್ರಮಾಣದ ಬಿಡ್ ಮೊತ್ತ ಮತ್ತು ಇತರೇ ಎಲ್ಲಾ ತೆರಿಗೆ ಪಾವತಿಸಿದ ನಂತರ ಲಾಟುಗಳನ್ನು ಡಿಪೋದಲ್ಲಿ, ಬಿಡುಗಡೆ ಆದೇಶದ ದಿನದಿಂದ ಖರೀದಿದಾರರ ಸ್ವಂತ ಜವಾಬ್ದಾರಿಯ ಮೇಲೆ ಇಟ್ಟುಕೊಳ್ಳಲಾಗುವುದು. ಈ ಖರೀದಿಸಿದ ಲಾಟುಗಳಿಗೆ ಕಳ್ಳತನ, ಬೆಂಕಿ ಅಥವಾ ಇತರೇ ಯಾವುದೇ ನೈಸರ್ಗಿಕ ಕಾರಣಗಳಿಂದ ಉಂಟಾಗುವ ನಷ್ಟಕ್ಕೆ ಸರ್ಕಾರವು ಜವಾಬ್ದಾರಿಯಾಗಿರುವುದಿಲ್ಲ.

18) ಕಂಡಿಕೆ.13(1)ಕ್ಕೆ ಪೂರಕವಾಗಿ ಬಿಡ್ ಮೊಬಲಗನ್ನು ಖರೀದಿದಾರರು ಹಂತ ಹಂತವಾಗಿ ನಿಗಧಿತ ಅವಧಿಯೊಳಗೆ ಪಾವತಿಸಬಹುದಾಗಿದೆ. ಹಾಗೂ ಹೀಗೆ ಪಾವತಿಸಿದ ಹಣಕ್ಕೆ ಅನುಗುಣವಾಗಿ ಸೇಲ್‌ಸ್ಲಿಪ್‌ನಲ್ಲಿ ಇರುವ ಲಾಟನ್ನು ಮಾತ್ರ ಬಿಡುಗಡೆ ಮಾಡಲಾಗುವುದು. ಹರಾಜಿನ ದಿನಾಂಕದಂದು ಪಾವತಿಸಿದ $^1/_4$ ಭಾಗದ ಬಿಡ್ ಮೊತ್ತವನ್ನು ಕೊನೆಯಲ್ಲಿ ಬಿಡುಗಡೆಗೆ ಹೊಂದಾಣಿಕೆ ಮಾಡಿಕೊಳ್ಳಲಾಗುವುದು. ಸೇಲ್ ಸ್ಲಿಪ್‌ನಲ್ಲಿ ಇರುವ ಯಾವುದೇ ಲಾಟುಗಳನ್ನು ಭಾಗಶಃ ಬಿಡುಗಡೆಗೊಳಿಸುವುದಿಲ್ಲ. ಯಾವುದೇ ಲಾಟುಗಳಿಗೆ ಸಂಬಂಧಿಸಿದಂತೆ ಪೂರ್ಣ ಮೊತ್ತ ಪಾವತಿಸದ ಹೊರತು ಆ ಲಾಟನ್ನು ಬಿಡುಗಡೆಗೊಳಿಸಲಾಗುವುದಿಲ್ಲ.

19) ಖರೀದಿಸಿದ ನಾಟಾವನ್ನು ಈ ಕೆಳಕಾಣಿಸಿದ ಕಾರಣಗಳ ಹೊರತು ಬಿಡುಗಡೆಗೊಳಿಸಲು ಅನುಮತಿ ನೀಡಲಾಗುವುದಿಲ್ಲ.

   1) ಮಾರಾಟ ಮಾಡಿದ ನಾಟಾ ಅರಣ್ಯಾಧಿಕಾರಿಗಳಿಂದ ಗುರ್ತು ಮಾಡಿರಬೇಕು.

   2) ಅಧಿಕೃತ ಅಧಿಕಾರಿಯಿಂದ ಪಡೆದ ನಿಗಧಿತ ರಹದಾರಿ ಹೊಂದಿರಬೇಕು.

20) ಖರೀದಿಸಿದ ಎಲ್ಲಾ ಮಾಲನ್ನು ಬಿಡುಗಡೆ ಆದೇಶ ನೀಡಿದ 60 ದಿವಸಗಳೊಳಗೆ ಸಾಗಿಸಿಕೊಳ್ಳಬೇಕು. ಈ ಷರತ್ತನ್ನು ಉಲ್ಲಂಘಿಸಿದಲ್ಲಿ ಪಾವತಿಸಿದ ಎಲ್ಲಾ ಮೊಬಲಗು ಹಾಗೂ ಸಾಗಿಸಿಕೊಳ್ಳಲು ಬಾಕಿ ಉಳಿದ ಮಾಲನ್ನು ಯಾವುದೇ ಮಾಹಿತಿ ನೀಡದೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

21) ಹರಾಜಿಗೆ ಇಡಲಾದ ನಾಟಾದ ಪ್ರಮಾಣವನ್ನು ಹೆಚ್ಚಿಸುವ ಅಥವಾ ತಗ್ಗಿಸುವ ಅಧಿಕಾರವನ್ನು ಹರಾಜು ನಡೆಸುವ ಅಧಿಕಾರಿಯು ಹೊಂದಿರುತ್ತಾರೆ. ಹಾಗೆಯೇ ಹರಾಜು ಅವಧಿ (ವೇಳೆ)ಯನ್ನು ಹೆಚ್ಚಿಸುವ ಅಥವಾ ತಗ್ಗಿಸುವ ಅಧಿಕಾರವನ್ನು ಹೊಂದಿರುತ್ತಾರೆ.

22) ಹರಾಜಿನಲ್ಲಿ ಭಾರತೀಯರು ಮಾತ್ರ ಭಾಗವಹಿಸಲು ಅರ್ಹರಾಗಿರುತ್ತಾರೆ.

23) ಈ ಒಪ್ಪಂದದಲ್ಲಿ ಉಂಟಾಗುವ ಯಾವುದೇ ತಕರಾರುಗಳನ್ನು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ/ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಬೆಂಗಳೂರುರವರಿಗೆ ಮನವಿ ಸಲ್ಲಿಸಬಹುದಾಗಿದೆ. ಹಾಗೂ ಅವರು ನೀಡುವ ತೀರ್ಪು ಅಂತಿಮವಾಗಿರುತ್ತದೆ. ಹಾಗೂ ಅವರು ನೀಡುವ ತೀರ್ಪಿಗೆ ಬದ್ಧರಾಗಿರಬೇಕಾಗುತ್ತದೆ.

24) ಹರಾಜಿನಲ್ಲಿ ಖರೀದಿಸಿದ ನಾಟಾಗಳನ್ನು ತೆಗೆಯುವಾಗ ಸರ್ಕಾರಿ ಅಸ್ತಿಪಾಸ್ತಿಗೆ ನಷ್ಟ ಉಂಟಾದಲ್ಲಿ ಬಿಡ್ಡುದಾರರೇ ನೇರ ಜವಾಬ್ದಾರರಾಗಿರುತ್ತಾರೆ.

25) ಪಾವತಿಸಬೇಕಾದ ತೆರಿಗೆಗಳಾದ FDT-12%, VAT-12.5%, ಆದಾಯತೆರಿಗೆ, 2.5%, ಆದಾಯ ತೆರಿಗೆಯ ಮೇಲೆ ಸರ್‌ಚಾರ್ಜ್ ಶೇ.2.5 ಹಾಗೂ ಎಜುಕೇಷನ್ ಸೆಸ್ 3% ವಿಧಿಸಲಾಗುವುದು.

26) ಹೆಚ್ಚಿನ ವಿವರಗಳನ್ನು ಈ ಕೆಳ ಸಹಿದಾರರ ಕಚೇರಿಯಲ್ಲಿ, ವಲಯ ಅರಣ್ಯಾಧಿಕಾರಿ, ಪಾವಗಡ ವಲಯ ಹಾಗೂ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಮಧುಗಿರಿ ಉಪವಿಭಾಗ, ಮಧುಗಿರಿರವರುಗಳ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ,
ತುಮಕೂರು ವಿಭಾಗ, ತುಮಕೂರು.

ಪಿ.ಆರ್. 419

MYSORE URBAN DEVELOPMENT AUTHORITY, MYSORE.

No.MUDA/PB/TN/ 03 /2008-09, DATE: 21st July 2008

INVITATION FOR TENDERS

ONLY THROUGH E – TENDERING

Sl. No	Calendar of Events	Date & Time
1.	Commencement of Registration and issue of Electronic Bid Sheets	04.08.2008 10.00 Hrs. IST
2.	Last date & time for receipt of requisition for Electronic Bid Sheets	04.09.2008 16.00 Hrs. IST
3.	Last Date & time for receipt of Bids through Electronic Mode only.	05.09.2008 16.00 Hrs. IST
4.	Date & time of opening of Electronic Technical Bid	09.09.2008 11.00 Hrs. IST
5.	Pre bid meeting will be conducted	12.08.2008 11.00 IST

1. The intended bidder/ Agency can obtain User ID, Password and e-mail ID on presenting the Pass book (Contractors Registration Book) and entries will be made in the pass book at the time of registering for User ID & Password. If the contractor is unable to collect the User ID & Password in person, the same may be obtained through a representative with an authorization letter duly attesting his signature along with production of Passbook. The pre bid meeting will be conducted at the Office of Superintending Engineer, MUDA, Mysore as stated in the calendar of Events.
2. The Blank Tender documents can be obtained through our website **http://www.tenderwizard.com** by clicking on MUDA, which will link to **http://www.tenderwizard.in/muda** where electronic tender form is provided.
3. After the confirmation of payment, Bidders/ Contractors can download e-tender form (tender document) by making payment of amount as shown in the table enclosed towards the cost of documents through Demand Draft in favour of The Commissioner, MUDA, Mysore.
4. Bidders/ Contractors can access tender documents on the website, fill them and submit the completed tender document into electronic tender on the website itself. EMD shall be paid only in the form Bankers Cheque / D.D in favour of **Commissioner, MUDA, Mysore** payable at Mysore**.** The scanned copy of the EMD shall be attached to the e-tender document, failing which the bid will not be considered. The original EMD document should be submitted to the Commissioner, MUDA, at the Office of the Superintending Engineer, MUDA, Mysore on or before **16.00 Hrs IST on 05.09.2008** failing which the tenders will be rejected.
5. Bidders/ Contractors should attach all the scanned copies of the certificates as required in Eligibility criteria.
6. Corrigendum / Addendum/ Corrections, if any, will be published in the website.
7. The Authority reserves the right to accept / reject any or all tenders without assigning any reasons.
8. The Tenders are invited as per the provisions of the **Karnataka Transparency in Public Procurement 2000** & Annexures thereon.
9. Further details of works can be obtained from the Office of the Superintending Engineer, MUDA, Mysore on all working days. Any help regarding the participation in tendering can be had from the help desk Number: 93425-56736 (Mr.Avinash, KEONICS, Mysore) & Number: 93415-54868 (Mr.Chahesh, KEONICS, Mysore).

TABLE

SL. No	Name of work	Approximate value of work (Rs in Lakhs.)	Earnest Money Deposit (Rs in Lakhs)	Cost of document (Rs.)	Period of completion
1	Construction of Box Drain, L-Drain, RCC Deck Slab and Formation of Sites and Road in Hanchya-Sathagally 'B' Zone layout at Survey No.105 of Sathagally Layout, Mysore	134.87	1.35	12,000-00	9 Months

Superintending Engineer,
Mysore Urban Development Authority,
Mysore.

P.D. 79

ತೋಟಗಾರಿಕೆ ಇಲಾಖೆ

ತೋಟಗಾರಿಕೆ ಉಪನಿರ್ದೇಶಕರ ಕಛೇರಿ, ಲಾಲ್‌ಬಾಗ್ ಸಸ್ಯತೋಟ, ಬೆಂಗಳೂರು

ಟೆಂಡರ್ ಪ್ರಕಟಣೆ

ಸಂಖ್ಯೆ:ತೋಉನಿ:ಲಾಸತೋ:ಬಿಜಿಟ:ವಿನಿ1:21:08–09, ದಿನಾಂಕ:17ನೇ ಜುಲೈ 2008

ವಿಷಯ: ಲಾಲ್‌ಬಾಗ್ ಸಸ್ಯತೋಟದಲ್ಲಿ ಕಸ, ಎಲೆ, ಕಾಗದ, ಪ್ಲಾಸ್ಟಿಕ್ ಕಾಗದ, ಕತ್ತರಿಸಿದ ಹುಲ್ಲು, ಎಲೆ, ಕಡ್ಡಿ, ರೆಂಬೆ ಇತ್ಯಾದಿಗಳನ್ನು ಪ್ರತಿ ದಿನ ಗುಡಿಸಿ ಹೊರಸಾಗಿಸುವುದು.

ಲಾಲ್‌ಬಾಗ್ ಸಸ್ಯಶಾಸ್ತ್ರೀಯ ತೋಟದಲ್ಲಿ ಕಸ, ಎಲೆ, ಕಾಗದ, ಪ್ಲಾಸ್ಟಿಕ್ ಕಾಗದ, ಕತ್ತರಿಸಿದ ಹುಲ್ಲು, ಎಲೆ, ಕಡ್ಡಿ, ರೆಂಬೆ ಇತ್ಯಾದಿಗಳನ್ನು ಪ್ರತಿದಿನ ಗುಡಿಸಿ ಹೊರಸಾಗಿಸುವ ಕಾರ್ಯಕ್ಕೆ ಟೆಂಡರ್ ಅನ್ನು ಕರೆಯಲಾಗಿದೆ. ಟೆಂಡರ್ ಅನ್ನು ಸಲ್ಲಿಸಲು ಇಚ್ಛಿಸುವ ಟೆಂಡರ್‌ದಾರರು ಟೆಂಡರ್ Form ಗಳನ್ನು ಈ ಕಛೇರಿಯಿಂದ ದಿನಾಂಕ:16.8.08 ರಿಂದ 22.8.08ರವರೆಗೆ ರೂ.500/–ಗಳನ್ನು ಪಾವತಿಸಿ ಟೆಂಡರ್ Form ಗಳನ್ನು ಪಡೆಯಬಹುದಾಗಿದೆ. ಭರ್ತಿ ಮಾಡಿದ ಟೆಂಡರ್‌ಗಳನ್ನು ದಿನಾಂಕ:25.8.08 ಮಧ್ಯಾಹ್ನ 12.00 ಗಂಟೆಯೊಳಗೆ ಈ ಕಛೇರಿಗೆ ಸಲ್ಲಿಸುವುದು. ಹಾಗೂ ಅದೇ ದಿನ ಸಂಜೆ 4.00 ಗಂಟೆಗೆ ಟೆಂಡರ್‌ಗಳನ್ನು ತೆರೆಯಲಾಗುವುದು. ಟೆಂಡರ್ ಷರತ್ತು ಹಾಗೂ ನಿಬಂಧನೆಗಳನ್ನು ಈ ಕಛೇರಿಯಿಂದ ಪಡೆಯತಕ್ಕದ್ದು.

ತೋಟಗಾರಿಕೆ ಉಪನಿರ್ದೇಶಕರು,
ಲಾಲ್‌ಬಾಗ್ ಸಸ್ಯತೋಟ.

ಪಿ.ಆರ್. 402

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ರಾಮನಗರ ಪ್ರಾದೇಶಿಕ ವಿಭಾಗ, ರಾಮನಗರ ರವರ ಕಛೇರಿ

ಬಹಿರಂಗ ಹರಾಜು ಪ್ರಕಟಣೆ

ಸಂಖ್ಯೆ : ಎ6/ಉಅಸಂ/ಟಿಂಬರ್/ಸಿಆರ್–22/2008–09, ದಿನಾಂಕ: 16ನೇ ಜುಲೈ 2008

ವಿಷಯ: ರಾಮನಗರ ಪ್ರಾದೇಶಿಕ ವಲಯಕ್ಕೆ ಸೇರಿದ ವಿವಿಧ ನೆಡುತೋಪಿನಲ್ಲಿ ಕಡಿದು ಲಾಟ್ ಮಾಡಿರುವ ನೀಲಗಿರಿ ಟಿಂಬರ್ ಲಾಗ್ / ಆಕೇಶಿಯಾ ಲಾಗ್‌ಗಳ / ಪೋಲ್ಸ್‌ಗಳ ಹರಾಜು ಕುರಿತು.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ರಾಮನಗರ ಪ್ರಾದೇಶಿಕ ಅರಣ್ಯ ವಿಭಾಗದ ರಾಮನಗರ ವಲಯದ ವಿವಿಧ ನೆಡುತೋಪುಗಳಲ್ಲಿ ಕರ್ನಾಟಕ ಅರಣ್ಯ ಕೈಗಾರಿಕಾ ನಿಗಮ, ಬೆಂಗಳೂರು ಇವರ ವತಿಯಿಂದ ಕತ್ತಾವಣೆ ಮಾಡಿ ಇಲಾಖೆಗೆ ಹಸ್ತಾಂತರಿಸಿದ ಈ ಕೆಳಕಂಡ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಪರಿಮಾಣದ ನೀಲಗಿರಿ / ಆಕೇಶಿಯ ಮರಗಳಿಂದ ಲಭ್ಯವಾದ ಟಿಂಬರ್ / ಪೋಲ್ಸ್‌ಗಳನ್ನು ಲಾಟ್ ಮಾಡಿದ್ದು ಇವುಗಳನ್ನು ಬಹಿರಂಗ ಹರಾಜು ಮೂಲಕ ಕೆಳಕಂಡ ಸ್ಥಳ ಹಾಗೂ ದಿನಾಂಕದಂದು ಈ ಕೆಳಸಹಿದಾರರು ಅಥವಾ ಇವರಿಂದ ಅಧಿಕಾರ ಪಡೆದ ಅಧಿಕೃತ ಅಧಿಕಾರಿಯು ಕೆಳಕಂಡ ಷರತ್ತುಗಳ ಮೇಲೆ ಬಹಿರಂಗ ಹರಾಜನ್ನು ಮಾಡಲು ಉದ್ದೇಶಿಸಿ ಪ್ರಕಟಣೆ ಹೊರಡಿಸಲಾಗಿದೆ. ಇಚ್ಛೆಯುಳ್ಳ ಖರೀದಿದಾರರು ಹರಾಜಿನಲ್ಲಿ ಭಾಗವಹಿಸಿ ಈ ಕೆಳಕಂಡ ಷರತ್ತುಗೊಳಪಟ್ಟು ಉತ್ಪನ್ನವನ್ನು ಖರೀದಿಸಬಹುದಾಗಿರುತ್ತದೆ.

ಷೆಡ್ಯೂಲ್

ಕ್ರಮ ಸಂಖ್ಯೆ	ವಲಯ	ಹರಾಜಿಗೆ ಇಡಲಾಗಿರುವ ಉತ್ಪನ್ನದ ವಿವರಗಳು	ಅಂದಾಜು ಪರಿಮಾಣ	ಹರಾಜು ದಿನಾಂಕ ಮತ್ತು ವೇಳೆ	ಹರಾಜು ನಡೆಯುವ ಸ್ಥಳ
1	ರಾಮನಗರ	ನೀಲಗಿರಿ ನಾಟಾ ಆಕೇಶಿಯಾ ನಾಟಾ ನೀಲಗಿರಿ ಸರಗಳು	47.813 ಘಮೀ 1.427 ಘಮೀ 146 ಪೋಲ್ಸ್‌ಗಳು	ದಿ: 20–08–2008 ಬೆಳಿಗ್ಗೆ 11.00 ಗಂಟೆಗೆ	ವಲಯ ಅರಣ್ಯಾಧಿಕಾರಿ, ರಾಮನಗರ ವಲಯ ಕಛೇರಿ ಆವರಣ

ಕ್ರಮ ಸಂಖ್ಯೆ	ವಲಯ	ಹರಾಜಿಗೆ ಇಡಲಾಗಿರುವ ಉತ್ಪನ್ನದ ವಿವರಗಳು	ಅಂದಾಜು ಪರಿಮಾಣ	ಹರಾಜು ದಿನಾಂಕ ಮತ್ತು ವೇಳೆ	ಹರಾಜು ನಡೆಯುವ ಸ್ಥಳ
2	ರಾಮನಗರ	ನೀಲಗಿರಿ ನಾಟಾ (ಮರು ಹರಾಜು)	45.5880 ಘಮೀ	ದಿ: 20–08–2008 ಬೆಳಿಗ್ಗೆ 11.00 ಗಂಟೆಗೆ	ವಲಯ ಅರಣ್ಯಾಧಿಕಾರಿ, ರಾಮನಗರ ವಲಯ ಕಛೇರಿ ಆವರಣ

ಷರತ್ತುಗಳು

1. ಆಸಕ್ತ ಖರೀದಿದಾರರು ಈ ಕೆಳಗೆ ನಮೂದಿಸಿದ ಪ್ರಮಾಣದಲ್ಲಿ ಇಎಂಡಿ ಮೊತ್ತವನ್ನು ರಾಷ್ಟ್ರೀಕೃತ ಅಥವಾ ಲೋಕಲ್ ಷೆಡ್ಯೂಲ್ ಬ್ಯಾಂಕುಗಳ ಡಿಮಾಂಡ್ ಡ್ರಾಫ್ಟನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಪದನಾಮದಲ್ಲಿ ತೆಗೆದು ಸವಾಲಿನ ಪೂರ್ವದಲ್ಲಿ ನಡೆಸುವ ಅಧಿಕಾರಿಗಳ ಬಳಿಯಲ್ಲಿ ನೀಡಬೇಕು, ಹೀಗೆ ನೀಡಲಾದ ಇಎಂಡಿ ಮೊತ್ತವನ್ನು ಯಶಸ್ವಿ ಬಿಡ್ಡುದಾರರು ಖರೀದಿಸಲಾಗುವ ಮರಮುಟ್ಟುಗಳ ಮೌಲ್ಯದ 1/4 ಭಾಗದ ಹಣಕ್ಕೆ ಹೊಂದಾಣಿಕೆ ಮಾಡಿಕೊಳ್ಳಲಾಗುವುದು.

   ಇಎಂಡಿ ಮೊತ್ತ ಮಾಲಿನ ಬೆಲೆ 20,000–00 ಇದ್ದಲ್ಲಿ ರೂ. 5,000–00 ರೂ. 20,000–00 ಮೀರಿದ್ದಲ್ಲಿ ರೂ. 20,000–00 (ಪ್ರತಿ ಲಾಟಿಗೆ)
2. ಷೆಡ್ಯೂಲ್‌ನಲ್ಲಿ ಸೂಚಿಸಿರುವ ನಿಗಧಿತ ಸಮಯ ಮತ್ತು ದಿನಾಂಕದಂದು ಹರಾಜುನ್ನು ನಡೆಸಲಾಗುವುದು. ಒಂದೊಮ್ಮೆ ಸದರಿ ದಿನದಂದು ಹರಾಜು ನಡೆಸಲು ಅನಿವಾರ್ಯ ಕಾರಣಗಳಿಂದ ಸಾಧ್ಯವಾಗದಿದ್ದಲ್ಲಿ ಮರು ಹರಾಜನ್ನು ದಿನಾಂಕ: 26–08–2008 ರಂದು ಬೆಳಿಗ್ಗೆ 11.00 ಗಂಟೆಗೆ ನಡೆಸಲಾಗುವುದು.
3. ಇಡಿಗಂಟನ್ನು ಜಮಾ ಮಾಡದೇ ಬಿಡ್‌ದಾರರು ಹರಾಜಿನಲ್ಲಿ ಭಾಗವಹಿಸುವ ಹಕ್ಕು ಇರುವುದಿಲ್ಲ.
4. ಲಾಟುಗಳಲ್ಲಿ ಒಳಗೊಂಡ ದಿಮ್ಮಿಗಳ ಸಂಖ್ಯೆ ಪರಿಮಾಣಗಳನ್ನು ಘ.ಮೀ.ಗಳಲ್ಲಿ ನಮೂದಿಸಲಾಗುವುದು. ಏಳೆಗಳಿದ್ದಲ್ಲಿ ಸಂಖ್ಯೆಗಳನ್ನು ನಮೂದಿಸಲಾಗುವುದು. ಖರೀದಿದಾರರ ಬೇಡಿಕೆಯು ಸಂಬಂಧಿಸಿದ ಲಾಟ್‌ನ ಮಾಲಿಗೆ ಮಾತ್ರ ಸೀಮಿತವಾಗಿರುತ್ತದೆ.
5. ಷೆಡ್ಯೂಲ್‌ನಲ್ಲಿ ಸೂಚಿಸಿರುವ ಮತ್ತು ಕತ್ರಾವಣೆ ಮಾಡಿ ಲಾಟ್ ಮಾಡಿರುವ ನೀಲಗಿರಿ ಮರಗಳ ಲಾಗ್‌ಗಳನ್ನು ಪರಿಶೀಲಿಸಿ ಖಚಿತಪಡಿಸಿಕೊಂಡ ನಂತರ ಹರಾಜಿನಲ್ಲಿ ಭಾಗವಹಿಸಬೇಕು.
6. ಷೆಡ್ಯೂಲ್‌ನಲ್ಲಿ ನಮೂದಿಸಿರುವ ಪರಿಮಾಣಕ್ಕೆ ವಲಯ ಅರಣ್ಯಾಧಿಕಾರಿಯವರ ಕಛೇರಿ ಆವರಣದಲ್ಲಿ ಪ್ರತಿ ಲಾಟ್‌ನ್ನು ಪ್ರತ್ಯೇಕವಾಗಿ ಹರಾಜು ಮಾಡಲಾಗುವುದು.
7. ಯಶಸ್ವಿ ಬಿಡ್ಡುದಾರರು ತಮ್ಮ ಸ್ವಂತ ಖರ್ಚಿನಲ್ಲಿ ವಿಲೇವಾರಿ ಮಾಡಿಕೊಳ್ಳತಕ್ಕದ್ದು.
8. ಟಿಂಬರ್ ಲಾಗ್‌ಗಳನ್ನು ಸಾಗಿಸಲು ಪರವಾನಗಿಯನ್ನು ನೀಡಲಾಗುವುದು. ಪರವಾನಗಿ ಶುಲ್ಕವನ್ನು ಯಶಸ್ವಿ ಬಿಡ್ಡುದಾರರು ವಲಯ ಅರಣ್ಯಾಧಿಕಾರಿ, (ಪ್ರಾದೇಶಿಕ) ರಾಮನಗರ ಇವರಲ್ಲಿ ಜಮಾ ಮಾಡತಕ್ಕದ್ದು.
9. ಹರಾಜಿನಲ್ಲಿ ಯಶಸ್ವಿಯಾದ ಬಿಡ್ಡುದಾರರು ಹರಾಜಿನ ದಿನದಂದೇ ತಾವು ಸೂಚಿಸಿದ ಹರಾಜಿನ ಮೊತ್ತದ ಶೇಕಡ 50 ರಷ್ಟು ಹಣವನ್ನು ಹಾಗೂ ಸೂಚಿಸಿದ ಮೊತ್ತಕ್ಕೆ ಅನ್ವಯಿಸುವ ಪೂರ್ಣ ತೆರಿಗೆಯನ್ನು ಅಂದರೆ ವ್ಯಾಟ್ **12.5%**, ಅರಣ್ಯ ಅಭಿವೃದ್ಧಿ ತೆರಿಗೆ **12%**, ಆದಾಯ ತೆರಿಗೆ **2.5**% ಮತ್ತು ಆದಾಯ ತೆರಿಗೆ ಮೇಲೆ ಸೆಸ್ **3**% ರಷ್ಟು ತೆರಿಗೆಗಳನ್ನು ಪಾವತಿಸಬೇಕು. ತಪ್ಪಿದಲ್ಲಿ ಇ.ಎಂ.ಡಿ. ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು 2ನೇ ಬಿಡ್ಡುದಾರರನ್ನು ಯಶಸ್ವಿ ಬಿಡ್ಡುದಾರರೆಂದು ಪರಿಗಣಿಸಲಾಗುವುದು.
10. ಬಹಿರಂಗ ಹರಾಜಿನಲ್ಲಿ ಉದ್ಭವಿಸಬಹುದಾದ ತಂಟೆತಕರಾರುಗಳಿಗೆ ಉಪ ಅರಣ್ಯ ಸಂರಕ್ಷಣಾಧಿಕಾರಿ, ರಾಮನಗರ ಪ್ರಾದೇಶಿಕ ವಿಭಾಗ, ರಾಮನಗರ ರವರು ನೀಡುವ ತೀರ್ಮಾನವೇ ಅಂತಿಮವಾಗಿರುತ್ತದೆ.
11. ಕಪ್ಪು ಪಟ್ಟಿಯಲ್ಲಿರುವ ಬಿಡ್‌ದಾರರು ಅಥವಾ ದಿವಾಳಿಯಾಗಿರುವವರು ಈ ಬಹಿರಂಗ ಹರಾಜಿನಲ್ಲಿ ಭಾಗವಹಿಸಲು ಅರ್ಹರಿರುವುದಿಲ್ಲ.
12. ಹರಾಜಿನ ನಂತರ ಬರುವ ಬೆಲೆಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ.
13. ಯಾವುದೇ ತಂಟೆತಕರಾರುಗಳಿದ್ದಲ್ಲಿ ಹರಾಜು ಪ್ರಾರಂಭಿಸುವ ಎರಡು ಗಂಟೆ ಮುಂಚಿತವಾಗಿ ಸಂಬಂಧಿಸಿದ ಅಧಿಕಾರಿಗಳ ಗಮನಕ್ಕೆ ಲಿಖಿತ ಮೂಲಕ ತರತಕ್ಕದ್ದು ಹಾಗೂ ಹರಾಜಿನ ನಂತರ ತಡವಾಗಿ ಬರುವ ಯಾವುದೇ ತರಹದ ದೂರುಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ.
14. ಯಶಸ್ವಿ ಬಿಡ್‌ದಾರರು ಹರಾಜು ಸ್ಥಿರೀಕರಣ ಆದೇಶ ಪಡೆದ 7 ದಿನಗಳೊಳಗಾಗಿ ನೀಲಗಿರಿ ಟಿಂಬರ್ ಲಾಗ್‌ಗಳನ್ನು ಬಾಕಿ ಇರುವ ಬಿಡ್‌ನ ಮೊತ್ತವನ್ನು ವಲಯ ಅರಣ್ಯಾಧಿಕಾರಿ, ರಾಮನಗರ ಇವರಿಗೆ ಪಾವತಿಸಿ ನೀಲಗಿರಿ ಟಿಂಬರ್ ಲಾಗ್‌ಗಳನ್ನು ತೆಗೆದುಕೊಂಡು ಹೋಗತಕ್ಕದು ನಿಗಧಿತ ಅವಧಿಯಲ್ಲಿ ಟಿಂಬರ್‌ನ್ನು ಸಾಗಿಸದ ಪಕ್ಷದಲ್ಲಿ E.M.D. ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದಲ್ಲದೆ ಬಿಡ್‌ದಾರರ ಜವಾಬ್ದಾರಿ ಮೇರೆಗೆ ನೀಲಗಿರಿ ಟಿಂಬರ್‌ನ್ನು ಮರು ಹರಾಜು ಮಾಡಲಾಗುವುದು. ಮರು ಹರಾಜಿನಲ್ಲಿ ಕಡಿಮೆ ಬಿಡ್ ಬಂದ ಸರ್ಕಾರಕ್ಕೆ ನಷ್ಟವಾದಲ್ಲಿ 1963 ರ ಅರಣ್ಯ ಕಾಯ್ದೆ ಸೆಕ್ಷನ್ 109 ರಂತೆ ಬಾಕಿಯನ್ನು ಭೂಕಂದಾಯ ರೂಪದಲ್ಲಿ ವಸೂಲಿ ಮಾಡಲಾಗುವುದು

ಅಥವಾ ಸರಕು ಸಾಮಾಗ್ರಿಗಳ ಮಾರಾಟದ ಕಾನೂನಿನನ್ವಯ ಅಥವಾ ಭಾರತೀಯ ದಂಡ ಸಂಹಿತೆ (Civil procedure) ಅನ್ವಯ ಕ್ರಮ ಕೈಗೊಳ್ಳಲಾಗುವುದು.

15. ಈ ಹರಾಜನ್ನು ಯಾವುದೇ ಕಾರಣ ನೀಡದೆ ತಿರಸ್ಕರಿಸುವ ಪೂರ್ಣ ಅಧಿಕಾರವನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಪಡೆದಿರುತ್ತಾರೆ.
16. ಕರ್ನಾಟಕ ರಾಜ್ಯದಲ್ಲಿಯ ಸವಾಲುದಾರರನ್ನು ಹೊರತುಪಡಿಸಿ, ಅಥವಾ ಯಾವುದೇ ತರಹದ ಆಸ್ತಿಯು ಕರ್ನಾಟಕ ರಾಜ್ಯದಲ್ಲಿ ಇಲ್ಲದಂಥ ಸವಾಲುದಾರರು ಹರಾಜಿನಲ್ಲಿ ಭಾಗವಹಿಸುವುದಕ್ಕಿಂತ ಮುಂಚಿತವಾಗಿ ಹರಾಜು ಮಾಡುವ ಅಧಿಕಾರಿಗೆ ತಮ್ಮ ಬಿಡ್‌ನ ಅರ್ಧ ರಕಂನ್ನು ಜಾರಿಯಲ್ಲಿದ ಮಾರಾಟ ಕರ ಮತ್ತು ಅರಣ್ಯಾಭಿವೃದ್ಧಿ ಕರ ಕೊಡಬೇಕು. ಸದರಿ ರಕಂ ಮುಂದಿನ 100 ರೂಗೆ ಸರಿ ಇರಬೇಕು ಮೇಲೆ ವಿವರಿಸಿದಂತೆ ಯಶಸ್ವಿ ಬಿಡ್‌ದಾರರು ಶೇಕಡಾ 50 ಬಿಡ್‌ನ ರಕಂ ಕಟ್ಟಿದಲ್ಲಿ ಉಳಿದ ಶೇ 50 ರಕಂನ್ನು ಚಾಲ್ತಿಯಲ್ಲಿರುವ ಎಲ್ಲಾ ಕರಗಳೊಡನೆ ಪಾವತಿ ಮಾಡತಕ್ಕದ್ದು ಶೇ 50 ಉಳಿದ ಹಣವನ್ನು ಕರಾರುನಾಮೆ ಸಹಿ ಮಾಡುವುದಕ್ಕಿಂತ ಪೂರ್ವದಲ್ಲಿ ಪಾವತಿ ಮಾಡಬೇಕಾಗುವುದು.
17. ಬಿಡ್ಡುದಾರರು ಹರಾಜನ್ನು ನಡೆಸುವ ಅಧಿಕಾರಿಯ ಬಳಿ ನೀಡುವ ವಿಳಾಸವೇ ಅಂತಿಮ ಈ ವಿಳಾಸಕ್ಕೆ ಅಂಚೆ ದೃಢೀಕರಣ ಪತ್ರ ಪಡೆದು ಕಳುಹಿಸಿದ ಪತ್ರವು ಬಿಡ್ಡುದಾರರಿಗೆ ತಲುಪಿದೆ ಎಂದೇ ತಿಳಿಯಲಾಗುವುದು.
18. ಪ್ರತಿ ಲಾಟ್‌ಗೆ ಅತಿ ಹೆಚ್ಚು ಬಿಡ್ಡು ಮಾಡಿದ ಬಿಡ್ಡುದಾರರ ಹೆಸರನ್ನು ದಾಖಲಿಸಿ ಅವರ ಸಹಿಯನ್ನು ಬಿಡ್ಡರ್ಸ್ ಪಟ್ಟಿಯಲ್ಲಿ ತೆಗೆದುಕೊಳ್ಳಲಾಗುವುದು ಅನಂತರ ಯಾವುದೇ ಬಿಡ್ಡನ್ನು ಅಂಗೀಕರಿಸುವುದಿಲ್ಲ.
19. ಒಂದು ವೇಳೆ ಅತಿ ಹೆಚ್ಚು ಬಿಡ್ಡು ಮಾಡಿದ ಬಿಡ್ಡುದಾರರ ದರವನ್ನು ಹರಾಜು ನಡೆಸುವ ಅಧಿಕಾರಿ ತಿರಸ್ಕರಿಸಿದಲ್ಲಿ, ನಂತರದ ಅತಿ ಹೆಚ್ಚು ಬಿಡ್ಡು ಮಾಡಿರುವವರ ಬಿಡ್ಡನ್ನು ಅಧಿಕಾರಿಯು ಒಪ್ಪಬಹುದು ಅಥವಾ ಮರು ಹರಾಜು ಮಾಡಬಹುದು.
20. ಬಿಡ್ಡುದಾರರು ಬಿಡ್ಡನ್ನು ಒಪ್ಪಿದಲ್ಲಿ ಬಿಡ್ಡುದಾರರು E.M.D ಯ ಜೊತೆಗೆ ಪುನಃ ಹರಾಜಿನ ಮೊತ್ತದ ಶೇ. 2 ರ ಭಾಗವನ್ನು ಠೇವಣಿಯಾಗಿ ಇಡಬೇಕು.
21. ವಿಫಲರಾದ ಬಿಡ್‌ದಾರರ ಠೇವಣಿ ಹಣವನ್ನು ಹರಾಜು ಮುಗಿದ ತಕ್ಷಣ ಹಿಂತಿರುಗಿಸಲಾಗುವುದು.
22. ಒಂದು ವೇಳೆ ಬಿಡ್‌ದಾರರು ನಮೂದಿಸಿರುವ ಹಣವನ್ನು ಮೇಲಾಧಿಕಾರಿಗಳು ತಿರಸ್ಕರಿಸಿದಲ್ಲಿ ಅವರು ಕಟ್ಟಿರುವ ಹಣವನ್ನು ತಕ್ಷಣವೇ ಹಿಂತಿರಿಗಿಸಲಾಗುವುದು.
23. ಯಶಸ್ವಿ ಹರಾಜುದಾರರಿಗೆ ಅವರ ಟೆಂಡರು ಒಪ್ಪಿಗೆಯಾಗಿರುವ ಬಗ್ಗೆ ನೋಂದಾಯಿತ ಅಂಚೆಯ ಮೂಲಕ ಮಾಹಿತಿ ನೀಡಲಾಗುವುದು ಹಾಗೂ ಕಛೇರಿ ಸೂಚನಾ ಫಲಕದಲ್ಲೂ ಅವರ ಹೆಸರನ್ನು ನಮೂದಿಸಲಾಗುವುದು, ಈ ರೀತಿ ಮಾಡಿದ ನಂತರ ಟೆಂಡರ್‌ದಾರರಿಗೆ ಅದರ ಒಪ್ಪಿಗೆಯ ಬಗ್ಗೆ ಮಾಹಿತಿ ನೀಡಲಾಗಿದೆ ಎಂದು ಭಾವಿಸಲಾಗುವುದು.
24. ಬಿಡ್ಡುದಾರರು ಎಲ್ಲಾ ಸಮಯದಲ್ಲೂ ಕರ್ನಾಟಕ ಅರಣ್ಯ ಕಾಯ್ದೆ ಮತ್ತು ಇತರೆ ಶಾಸನಬದ್ದ ಮಾರ್ಪಟುಗಳಿಗೆ ಬದ್ದರಾಗಿರುತ್ತಾರೆ.
25. ಬಿಡ್ಡುದಾರರು ಟೆಂಡರ್ ಷರತ್ತಿನ ಯಾವುದೇ ಅಂಶಗಳನ್ನು ಉಲ್ಲಂಘನೆ ಮಾಡಿದಲ್ಲಿ ಅವರ ಮುಂಗಡ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
26. ಈ ಹರಾಜಿಗೆ ಸಂಬಂಧಿಸಿದಂತೆ ಬೇಕಾದ ಇತರೆ ಮಾಹಿತಿಗಳನ್ನು ಈ ಕಛೇರಿಯ ಕೆಲಸದ ವೇಳೆಯಲ್ಲಿ ತಿಳಿದುಕೊಳ್ಳಬಹುದು.

ಎಸ್. ಶಾಂತಪ್ಪ

ಪಿ.ಆರ್. 408 ಉಪ ಅರಣ್ಯ ಸಂರಕ್ಷಣಾಧಿಕಾರಿ,

ರಾಮನಗರ ಪ್ರಾದೇಶಿಕ ವಿಭಾಗ, ರಾಮನಗರ.

ಕಮಾಂಡೆಂಟ್‌ರವರ ಕಛೇರಿ ಕರ್ನಾಟಕ ರಾಜ್ಯ ಮೀಸಲು ಪೊಲೀಸ್, 8ನೇ ಪಡೆ, ಶಿವಮೊಗ್ಗ

"ಟೆಂಡರ್–ಕಮ್–ಬಹಿರಂಗ ಹರಾಜು"

ಸಂಖ್ಯೆ:63/ವಾವಿ/2008–09, ದಿನಾಂಕ: 15ನೇ ಜುಲೈ 2008

ವಿಷಯ: ಈ ಘಟಕದ ವಾಹನ ಸಾರಿಗೆ ವಿಭಾಗದಲ್ಲಿರುವ 01 ಸಂಖ್ಯೆಯ ಅನುಪಯುಕ್ತ ಹಳೆಯ ವಾಹನವನ್ನು ಟೆಂಡರ್ ಬಹಿರಂಗ ಹರಾಜು ಮಾಡುವ ಬಗ್ಗೆ.

ಉಲ್ಲೇಖ: ಮಾನ್ಯ ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ಕರ್ನಾಟಕ ರಾಜ್ಯ, ಬೆಂಗಳೂರು ರವರ ಪತ್ರ ಸಂಖ್ಯೆ.ವಾಸಾ(1)/59/2007–2008 ದಿನಾಂಕ: 23.06.2008.

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಈ ಕೆಳಗೆ ಹೆಸರಿಸಿರುವ 01 ಸಂಖ್ಯೆಯ ಹಳೆಯ ಪೊಲೀಸ್ ವಾಹನವನ್ನು ಕರ್ನಾಟಕ ರಾಜ್ಯ ಮೀಸಲು ಪೊಲೀಸ್ 8ನೇ ಪಡೆ, ಮಾಚೇನಹಳ್ಳಿ, ಶಿವಮೊಗ್ಗ ಘಟಕದ ವಾಹನ ಸಾರಿಗೆ ವಿಭಾಗದಲ್ಲಿ ದಿನಾಂಕ:24.09.2008ರ ಬೆಳಿಗ್ಗೆ 11.00 ಗಂಟೆಗೆ ಟೆಂಡರ್ ಕಂ ಬಹಿರಂಗ ಹರಾಜು ಮಾಡಲಾಗುವುದು.

ವಾಹನ ವಿವರ

ಕ್ರ. ಸಂ.	ವಾಹನದ ನೊಂದಣಿ ಸಂಖ್ಯೆ	ಮಾದರಿ	ತಯಾರಿಕೆ ವರ್ಷ	ಷರಾ
1	ಸಿಎಜಿ – 193	ಹಿಂದೂಸ್ಥಾನ್ ಬೆಡ್ ಪೋರ್ಡ್ ವ್ಯಾನ್	1980	–

ಹರಾಜಿನ ಷರತ್ತು ಮತ್ತು ನಿಬಂಧನೆಗಳು

1. ಮೊಹರು ಮಾಡಿದ ಟೆಂಡರ್‌ನ್ನು ಕಮಾಂಡೆಂಟ್, 8ನೇ ಪಡೆ, ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಶಿವಮೊಗ್ಗ ಇವರಿಗೆ ಅನುಪಯುಕ್ತ ವಾಹನ ಖರೀದಿಗಾಗಿ ಟೆಂಡರ್ ಎಂದು ಲಕೋಟೆಯ ಮೇಲೆ ಬರೆದು ಕಳಿಸುವುದು.
2. ಅತೀ ಹೆಚ್ಚಿನ ಬೆಲೆಯನ್ನು ಅಂಕಿ ಮತ್ತು ಅಕ್ಷರಗಳಲ್ಲಿ ಬರೆಯತಕ್ಕದ್ದು.
3. ಹರಾಜಿನಲ್ಲಿ ಭಾಗವಹಿಸುವವರು ರೂ. 5,000–00 (ರೂ. ಐದು ಸಾವಿರ ಮಾತ್ರ) ಗಳನ್ನು ಹರಾಜಿಗೆ ಮೊದಲೇ ಠೇವಣಿಯಾಗಿ ಕಮಾಂಡೆಂಟ್‌ರು 8ನೇ ಪಡೆ, ಕೆಎಸ್‌ಆರ್‌ಪಿ ಶಿವಮೊಗ್ಗ ರವರಲ್ಲಿ ಠೇವಣಿಯಿಡತಕ್ಕದ್ದು.
4. ವಾಹನದ ಗುಣವನ್ನು ಅತೀ ಹೆಚ್ಚಿನ ಮೌಲ್ಯಕ್ಕೆ ಠೇವಣಿದಾರರಿಗೆ ಬಿಡಲಾಗುವುದು.
5. ಪೂರ್ಣಗೊಳಿಸಿದ ಟೆಂಡರ್ ಫಾರಂಗಳನ್ನು ದಿನಾಂಕ:24.09.2008 ರಂದು ಬೆಳಿಗ್ಗೆ 11.00 ಗಂಟೆಯವರಿಗೆ ಸ್ವೀಕರಿಸಲಾಗುವುದು. ನಂತರ ಬಂದ ಟೆಂಡರ್ ಫಾರಂಗಳನ್ನು ಪರಿಗಣಿಸಲಾಗುವುದಿಲ್ಲ. ಠೇವಣಿಯನ್ನು ತುಂಬಿದ ಟೆಂಡರ್‌ದಾರರು ಮಾತ್ರ ಹರಾಜಿನಲ್ಲಿ ಭಾಗವಹಿಸಲು ಅರ್ಹರಿರುತ್ತಾರೆ. ಟೆಂಡರ್ ಫಾರಂಗಳನ್ನು ವರ್ಗಾವಣೆ ಮಾಡಲಾಗುವುದಿಲ್ಲ.
6. ಯಶಸ್ವಿಯಾದ ಟೆಂಡರ್ ಸವಾಲುದಾರರು ಅನುಪಯುಕ್ತ ವಾಹನದ ಒಟ್ಟು ಬೆಲೆಯ ಶೇ. 25% ಹಣವನ್ನು (ಠೇವಣಿ ಸೇರಿ) ಸ್ಥಳದಲ್ಲಿಯೇ ನಗದು ರೂಪದಲ್ಲಿ ತುಂಬಬೇಕು. ಸದರಿ ಹರಾಜಿನಲ್ಲಿ ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ಹೆಚ್.ಡಿ.17/ಇಎಂವಿ/2008–09 ದಿನಾಂಕ: 05.06.2008 ರಲ್ಲಿ ರಚಿತವಾಗಿರುವ ಸಮಿತಿಯವರು ದೃಢೀಕರಿಸಿದ ನಂತರವೇ ಉಳಿದ ಶೇಕಡ 75% ರಷ್ಟು ತೆರಿಗೆ ಸೆಸ್ ಇತರೆಯನ್ನು ಡಿ.ಡಿ.ಮುಖಾಂತರ ಪಾವತಿ ಮಾಡಿ ಯಶಸ್ವಿಯಾದವರು 15 (ಹದಿನೈದು) ದಿವಸದೊಳಗಾಗಿ ತಮ್ಮ ಸ್ವಂತ ಖರ್ಚಿನಿಂದ ಸದರಿ ವಾಹನವನ್ನು ತೆಗೆದುಕೊಂಡು ಹೋಗತಕ್ಕದ್ದು. ತಪ್ಪಿದಲ್ಲಿ ಅವರು ತುಂಬಿದ ಶೇಕಡ25% ರಷ್ಟು ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
7. ಹರಾಜು ಮುಗಿದ ನಂತರ ಯಶಸ್ವಿಯಾಗದ ಟೆಂಡರ್ ಸವಾಲುದಾರರ ಠೇವಣಿ ಹಣವನ್ನು ಮತ್ತು ಡಿ.ಡಿ.ಯನ್ನು ಸ್ಥಳದಲ್ಲಿಯೇ ಹಿಂತಿರುಗಿಸಲಾಗುವುದು.
8. ಮೇಲೆ ತಿಳಿಸಿರುವ ಹರಾಜಿನಲ್ಲಿ ಯಾವುದೇ ಟೆಂಡರ್ ಸವಾಲನ್ನು ಯಾವುದೇ ಕಾರಣಕ್ಕಾಗಿ ರದ್ದುಗೊಳಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಕಮಾಂಡೆಂಟ್ ರವರು ಹೊಂದಿರುತ್ತಾರೆ. ಯಾವುದೇ ವಾದ ವಿವಾದ ಉದ್ಭವಿಸಿದ್ದಲ್ಲಿ ಮಾನ್ಯ ಮಹಾ ನಿರ್ದೇಶಕರು ಮತ್ತು ಪೊಲೀಸ್ ಮಹಾ ನಿರೀಕ್ಷಕರು ಕರ್ನಾಟಕ ರಾಜ್ಯ, ಬೆಂಗಳೂರು ರವರು ನೀಡುವ ನಿರ್ಣಯವೇ ಅಂತಿಮವಾಗಿರುತ್ತದೆ.
9. ಇಚ್ಛೆಯುಳ್ಳ ಟೆಂಡರ್ ಸವಾಲುದಾರರು ಹರಾಜು ಮಾಡಲಿರುವ ಅನುಪಯುಕ್ತ (ಯಥಾ ಸ್ಥಿತಿಯಲ್ಲಿರುವ) ವಾಹನದ ವಿವರವನ್ನು ಕಮಾಂಡೆಂಟ್, 8ನೇ ಪಡೆ, ಕೆಎಸ್‌ಆರ್‌ಪಿ ವಾಹನ ಸಾರಿಗೆ ವಿಭಾಗದಲ್ಲಿ ಕಛೇರಿಯ ವೇಳೆಯಲ್ಲಿ ನೋಡಬಹುದು.
10. ಸರ್ಕಾರದ ವಾಹನಗಳ ಹರಾಜಿನಲ್ಲಿ ಭಾಗಿದಾರರಾಗುವ ಎಲ್ಲರೂ ಸರ್ಕಾರಿ ನಿಯಮಗಳಿಗೆ ಬದ್ಧರಾಗಿರತಕ್ಕದ್ದು.

ಕಮಾಂಡೆಂಟ್

ಪಿ.ಆರ್. 404

ಕರ್ನಾಟಕ ರಾಜ್ಯ ಮೀಸಲು
ಪೊಲೀಸ್, 8ನೇ ಪಡೆ, ಶಿವಮೊಗ್ಗ.

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ

ಅಧಿಸೂಚನೆ

ಸಿಆಸುಇ 147 ಡಿಎಫ್‌ಆರ್ 2007, ಬೆಂಗಳೂರು, ದಿನಾಂಕ: 24ನೇ ಜುಲೈ 2008

ವಿಷಯ: ಕರ್ನಾಟಕ ಸರ್ಕಾರ ಸಚಿವಾಲಯದ ಕಛೇರಿಗಳಿಗೆ ಲೇಖನ ಹಾಗೂ ಇತರೆ ಸಾಮಗ್ರಿಗಳನ್ನು ಖರೀದಿಸುವ ಬಗ್ಗೆ.

ಕರ್ನಾಟಕ ಸರ್ಕಾರ ಸಚಿವಾಲಯದ ಕಛೇರಿಗಳಿಗೆ ಲೇಖನ ಹಾಗೂ ಇತರೆ ಸಾಮಗ್ರಿಗಳನ್ನು ಖರೀದಿಸುವ ಸಲುವಾಗಿ ಕರೆಯಲಾಗಿದ್ದ ಟೆಂಡರ್ ಪ್ರಕಟಣೆ ಸಂಖ್ಯೆ: ಸಿಆಸುಇ 147 ಡಿಎಫ್‌ಆರ್ 2007 ದಿನಾಂಕ: 19.05.2008ನ್ನು ಈ ಮೂಲಕ ರದ್ದುಗೊಳಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ.ಎಸ್. ಮಂಜುನಾಥ್

ಪಿ.ಆರ್. 421

ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಕಾರ್ಯಕಾರಿ)